

## ಹೆಸರೇನು?

ಮನೆಗೆ ಅಪರೂಪದ ಅತಿಥಿಯೊಬ್ಬರು ಬಂದಿದ್ದರು. ಅವರಿಗೆ ತಿಂಡಿ ಮಾಡಿ ತಟ್ಟೆಯಲ್ಲಿ ಹಾಕಿ ಕೊಡಲು ಹೊರಟಾಗ ನಮ್ಮ ಪುಟ್ಟ ತಾನೇ ಕೊಡಬೇಕು ಎಂದು ಹಟಮಾಡಿದ. 'ಸರಿ, ಕೊಟ್ಟು ಬಾ' ಎಂದು ಅವನ ಕೈಯಲ್ಲಿ ಕೊಟ್ಟು ಕಳಿಸಿದೆವು. ಅವರು ಪ್ರೀತಿಯಿಂದ ಅವನ ಕೆನ್ನೆ ತಟ್ಟಿ, 'ಏನು ಮರಿ ನಿನ್ನ ಹೆಸರು?' ಎಂದು ಕೇಳಿದರು. ಅವನು 'ನಿ ತಿನ್' ಎಂದ. 'ನಾನು ತಿನ್ತೀನಪ್ಪಾ, ನಿನ್ನ ಹೆಸರು ಏನು ಹೇಳು' ಎಂದು ಮತ್ತೆ ಕೇಳಿದಾಗ ಅವನು, 'ನಿ ತಿನ್' ಅಂದ. ಅವರು, 'ಈ ಹುಡುಗನಿಗೆ ಹೆಸರು ಹೇಳಲೂ ಕಲಿಸಿಲ್ಲವೆ? ನೀ ತಿನ್ನು, ನೀ ತಿನ್ನು ಅಂತಿದ್ದಾನೆ?' ಎಂದು ಕೇಳಿದರು. ಒಳಗಿನಿಂದ ಅವನ ಅಜ್ಜಿ ಬಂದು, 'ಅಯ್ಯೋ, ಅವನು ಹೇಳಿದ್ದು ಅವನ ಹೆಸರೇ... ನಿತಿನ್...' ಎಂದು ಸ್ಪಷ್ಟನೆ ಕೊಟ್ಟರು.

**ಅರ್ಚನಾ ವಿ. ರಾವ್**





## ವೈಫು ಬೇಕು

ಕಳೆದ ವರ್ಷ ಲಾಕ್‌ಡೌನ್ ಸಮಯದಲ್ಲಿ ಹಳ್ಳಿಯಿಂದ ನೆಂಟರ ಕುಟುಂಬ ನಮ್ಮ ಮನೆಗೆ ಬಂದಿತ್ತು. ಅವರು ಹಿಂದಿರುಗಿದ ಮಾರನೇ ದಿನವೇ ಪ್ರಾಥಮಿಕ ಶಾಲೆಯಲ್ಲಿ ಓದುವ ಅವರ ಮಗ ರೋಹಿತ್ 'ನನಗೂ ವೈಫು ಬೇಕು' ಎಂದು ಹಟ ಹಿಡಿದ. ಅವರು ಗಾಬರಿಯಾಗಿ, 'ನಿನಗೇನೊ ಬಂತು? ಊರಿಂದ ಬಂದಾಗಿಂದ ವೈಫು ಬೇಕು ಅಂತಿದ್ದೀಯಾ? ವೈಫು ತರಲು ಅದೇನು ಹುಡುಗಾಟಾನಾ?' ಎಂದು ಗದರಿದರಂತೆ. ಆದರೂ ಅವನು ಕೇಳಲಿಲ್ಲ. ಕೊನೆಗೆ ನಮಗೆ ಫೋನ್ ಬಂತು. ಹುಡುಗನೊಂದಿಗೆ ಮಾತಾಡಿದಾಗ ವಿಷಯ ಅರ್ಥವಾಗಿದ್ದು– ನಮ್ಮ ಮನೆಗೆ ಬಂದಾಗ ಅವನು ನಮ್ಮ ಮಗಳ ಕಡೆಯಿಂದ ವೈಫೈ ಬಗ್ಗೆ ತಿಳಿದುಕೊಂಡಿದ್ದಾನೆ. ಅಲ್ಲಿ ಗೇಮ್ ಆಡಲು ಅವನಿಗೆ ವೈಫೈ ಬೇಕಾಗಿದೆ. ಅದೇ ಅವನ ಬಾಯಿಯಲ್ಲಿ 'ವೈಫ್' ಆಗಿದೆ!

**ನಗರ ಗುರುದೇವ್ ಭಂಡಾರ್ಕರ್**